ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಸದಸ್ಯರು ಒಂದು ಬೇಡಿಕೆಯನ್ನು ಏನು ಇಟ್ಟಿದ್ದಾರೆ, ಅದರ ಬಗ್ಗೆ ಕೂಡ ಪರಿಶೀಲನೆ ನಡೆದಿದೆ. ಉತ್ತರ ಬಂದಮೇಲೆ ಬೇಕಾದರೆ ಅವರಿಗೆ ಉತ್ತರವನ್ನು ಒದಗಿಸುತ್ತೇನೆ.

ಪಿರಿಯಾಪಟ್ಟಣ ತಾಲ್ಲೂಕಿನ ಕರಡಿಲಕ್ಷ್ಮನ ಕೆರೆ ಏತ ನೀರಾವರಿ ಯೋಜನೆ

2135 - ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪಿರಿಯಾಪಟ್ಟಣ ತಾಲ್ಲೂಕಿನ ಕರಡಿಲಕ್ಷ್ಮನ ಕೆರೆ ಏತ ನೀರಾವರಿ ಯೋಜನೆಯಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರಕುವುದು ಹಾಗೂ ಇದಕ್ಕೆ ತಗಲುವ ಖರ್ಚೆಷ್ಟು;*

ಆ) *ಈ ಕಾರ್ಯ ಯಾವ ಹಂತದಲ್ಲಿದೆ ಹಾಗೂ ಈ ಯೋಜನೆಗಾಗಿ ಇದುವರೆವಿಗೂ ಖರ್ಚಾದ ಮೊತ್ತವೆಷ್ಟು?*

ಇ) *ಈ ಯೋಜನೆ ಹಾರಂಗಿ ಯೋಜನೆಯಡಿಯಲ್ಲಿ ಸೇರಿದೆಯೆ?*

ಈ) *ಈ ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಗಾಗಿ ಎಷ್ಟು ಟಿ.ಎಂ.ಸಿ. ನೀರನ್ನು ಇಟ್ಟಿದೆ ಈ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು?*

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) *ಅಚ್ಚುಕಟ್ಟು ಪ್ರದೇಶ 30,000 ಎಕರೆಗಳು ಅಂದಾಜು ವೆಚ್ಚ 19.60 ಕೋಟಿ ರೂ.ಗಳು (1985-86ರ ದರಗಳ ಪ್ರಕಾರ)*

ಆ) *ಈ ಯೋಜನೆಗೆ ಬೇಕಾಗುವ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಗಿದೆ. ಇದುವರೆಗೂ ಮಾಡಲಾಗಿರುವ ವೆಚ್ಚ 30 ಲಕ್ಷ ರೂ.ಗಳು.*

ಇ) *ಸೇರಿದೆ.*

ಈ) *5.82 ಟಿ.ಎಂ.ಸಿ. ಕಾಮಗಾರಿ ಪ್ರಾರಂಭಿಸಿದ ನಂತರ, ಹಣದ ಲಭ್ಯತೆಯನ್ನವಲಂಬಿಸಿ 3 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.*

ನಾನು ಮತ್ತು ಶ್ರೀ ಕಾಳಮರಿಗೌಡ ಅವರು ಕೂಡಿ ಮೊನ್ನೆ ಅವರ ಕ್ಷೇತ್ರದಲ್ಲಿ ಪ್ರವಾಸ ಮಾಡಿದ್ದೇವೆ. ಅವರು ನಾನು ಕೂಡಿ ಆ ಸ್ಥಳವನ್ನು ಕೂಡ ನೋಡಿದ್ದೆವು. ಅದಷ್ಟು ಶೀಘ್ರ ಆ ಕಾರ್ಯವನ್ನು ಮುಗಿಸಿಕೊಡುತ್ತೇನೆ ಎಂದು ಭರವಸೆಯನ್ನು ಈಗಾಗಲೇ ನಾನು ಕೊಟ್ಟಿದ್ದೇನೆ. ಅದನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ.ಎಸ್. ಕಾಳಮರಿಗೌಡ : ನಾವಿಬ್ಬರೂ ಪ್ರವಾಸ ಕೈಗೊಂಡಿದ್ದೆವು, ಆದಷ್ಟು ಬೇಗ ಮುಗಿಸಿಕೊಡುತ್ತೇನೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದಷ್ಟು ಬೇಗ ಎಂದರೆ ಎಷ್ಟು ದಿವಸಗಳಲ್ಲಿ ಅಥವಾ ಎಷ್ಟು ತಿಂಗಳಲ್ಲಿ ಎಂಬ ಭರವಸೆ ಕೊಟ್ಟರೆ ಸಾಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮೂರು ವರ್ಷಗಳಲ್ಲಿ ಈ ಕೆಲಸವನ್ನು ಕಂಪ್ಲೀಟ್ ಆಗಿ ಮುಗಿಸುತ್ತೀರಾ? ಅದಕ್ಕಿಂತ ಮುಂಚೆ ಕೆ.ಇ.ಬಿ. ಯದ್ದು ಎಷ್ಟು ದಿವಸಗಳಲಿ ಮುಗಿಸುತೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇದಕ್ಕೆ 9 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಬೇಕಾಗಿದ್ದು ಅದನ್ನು ಕ್ಯಾಬಿನೇಟ್ ಮುಂದೆ ತೆಗೆದುಕೊಂಡು ಹೋಗುತ್ತಿದ್ದೇನೆ. ಅದು ಅಪ್ರೂವಲ್ ಆದ ಕೂಡಲೇ ಕೆಲಸ ಪ್ರಾರಂಭ ಆಗುತ್ತದೆ.

ಬೆಳಗಾವಿ ಜಿಲ್ಲೆಯ ನೀರಾವರಿ ಕೆರೆಗಳು

2138 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾಶ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಚಿಕ್ಕಬೂದನೂರು ನೀರಾವರಿ ಟ್ಯಾಂಕ್ ಕಟ್ಟಡ ಕಟ್ಟುವ ಕೆಲಸಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಯಾವಾಗ ನೀಡಲಾಯಿತು ಮತ್ತು ಎಷ್ಟು ಹಣಕ್ಕೆ ಮಂಜೂರಾತಿ ನೀಡಲಾಯಿತು?

ಆ) ಈಗ ಹೊಸ ಸ್ಥಳಕ್ಕೆ (ಚೇಂಜ್ ಆಫ್ ಸೈಟ್) ಮಂಜೂರಾತಿ ನೀಡುವ ಸಲುವಾಗಿ ಮುಖ್ಯ ಅಭಿಯಂತರರು ಸಣ್ಣ ನೀರಾವರಿ ಇಲಾಖೆಯಲ್ಲಿ ಒಪ್ಪಿಗೆಗಾಗಿ ಉಳಿದಿರುವುದು ನಿಜವೇ ಇದ್ದು ಇನ್ನೂ ಎಷ್ಟು ದಿವಸಗಳಲ್ಲಿ ಇದಕ್ಕೆ ಒಪ್ಪಿಗೆ ಕೊಡಲಾಗುವುದು?

ಇ) ಈ ಹೊಸ ನೀರಾವರಿ ಕೆರೆಯಿಂದ (ಚೇಂಜ್ ಆಫ್ ಸೈಟ್) ಎಷ್ಟು ಎಕರೆಗೆ ನೀರಾವರಿ ಆಗುವುದು, ಮತ್ತು ಯಾವ ಕ್ಷೇತ್ರಗಳಿಗೆ ಯಾವ ಯಾವ ಊರಲ್ಲಿ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರಕುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಿಕ್ಕಬೂದನೂರು ನೀರಾವರಿ ಕೆರೆಯ ಅಂದಾಜಿಗೆ ಮೊದಲನೆಯ ನಿವೇಶನಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ರೂ. 79.69 ಲಕ್ಷಗಳಿಗೆ ದಿನಾಂಕ 10-07-89ರಂದು ಮತ್ತು ತಾಂತ್ರಿಕ ಮಂಜೂರಾತಿಯನ್ನು ದಿನಾಂಕ 27-07-89ರಂದು ರೂ.76.52 ಲಕ್ಷಗಳಿಗೆ ನೀಡಲಾಗಿದೆ.

ಆ) ಹೌದು. ಹೊಸ ಸ್ಥಳದಲ್ಲಿ ಕೆರೆ ನಿರ್ಮಾಣ ಮಾಡಲು ಹೈಡ್ರೊಲಜಿ ಮತ್ತು ಸರ್ವೆ ಕಾರ್ಯ ಕೈಗೊಂಡಿದ್ದು ಮಾರ್ಚ 92ರ ವೇಳೆಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

ಇ) ಸರ್ವೆ ಕಾರ್ಯ ಮುಗಿದು ಅಂದಾಜು ಪಟ್ಟಿ ತಯಾರಾದ ಮೇಲೆ ವಿವರಗಳು ದೊರಕುವುವು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಈವತ್ತಿನ ದಿವಸ ಈ ಹೊಸ ಸೈಟ್ ಸಲುವಾಗಿ, ಟೆಕ್ನಿಕಲ್ ಸ್ಯಾಂಕ್ಷನ್ ಕೊಡುವ ಸಲುವಾಗಿ, ಚೀಫ್ ಇಂಜಿನಿಯರ್ ಅವರ ಆಫೀಸಿಗೆ ಎಷ್ಟು ದಿವಸಗಳ ಹಿಂದೆ ಹೋಯಿತು? ಇನ್ನು ಎಷ್ಟು ದಿವಸಗಳಲ್ಲಿ ಇದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಡುತ್ತೀರಿ? ಹೋದವರ್ಷ ಸಹಿತ 30 ಲಕ್ಷ ರೂಪಾಯಿಗಳನ್ನು ಈ ಕೆಲಸಕ್ಕೆ ಇಟ್ಟಿದ್ದು ಅದು ಲ್ಯಾಪ್ಸ್ ಆಯಿತು. ಸರ್ಕಾರದವರು ಕೊನೆಯ ಪಕ್ಷ ಈ ವರ್ಷದಿಂದ ಕೆಲಸ ಪ್ರಾರಂಭಿಸಿ ಆ ಹಣ ಲ್ಯಾಪ್ಸ್ ಆಗದಹಾಗೆ ನೋಡುತ್ತಾರೆಯೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಕೆಲವಾರು ತಾಂತ್ರಿಕ ಕಾರಣಗಳಿಂದ ಅದು ಮುಂದುವರೆದಿತ್ತು. ಮಾನ್ಯ ಸದಸ್ಯರು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರ ಸಮೇತ 1991ನೇ ಇಸವಿ ಜನವರಿಯಲ್ಲಿ ಈಗಿರತಕ್ಕ ಸೈಟನ್ನು ಬದಲಾವಣೆ